ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರ ಕಛೇರಿ,
ಎಂ.ಇ.ಐ ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು-560073.

ಸಂಖ್ಯೆ: ಮು.ಅ.(ದಾ)/ತಾ.ಮ./ 26 /2022-23 ದಿನಾಂಕ: 21/11/2022

"ತಾಂತ್ರಿಕ ಮಂಜೂರಾತಿ ಪತ್ರ"

ವಿಷಯ :- Construction of Roads and drains in Chikkasandra and AGB Layout in ward No 17ರ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ ರವರ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ: ಕಾ.ಪಾ.ಅ/ದಾ.ವಿ/ಆ.ಮ/ /2022-23, ದಿನಾಂಕ:

ಪ್ರಸ್ತಾವನೆ:-

ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರು ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು **ರೂ.100.00 ಲಕ್ಷಗಳ** ಮೊತ್ತಕ್ಕೆ ತಯಾರಿಸಿ, ತಾಂತ್ರಿಕ ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರ ಪ್ರಸ್ತಾವನೆಯನ್ನು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸದರಿ Construction of Roads and drains in Chikkasandra and AGB Layout in ward No 17ರ ಕಾಮಗಾರಿಯ ಅಂದಾಜು ಮೊತ್ತ **ರೂ.100.00 ಲಕ್ಷಗಳ** ಮೊತ್ತಕ್ಕೆ ಪಾಲಿಕೆಯ 2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3726ರ ಅಡಿಯಲ್ಲಿ ಅನುದಾನ ನೀಡಲಾಗಿದ್ದು, ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಈ ಕಛೇರಿಯ ತಾಂತ್ರಿಕ ಮಂಜೂರಾತಿ ದಾಖಲಾತಿಯ ವಹಿಯ **ಕ್ರಮ ಸಂಖ್ಯೆ.** 26 , ಮತ್ತು **ಪುಟ ಸಂಖ್ಯೆ:** 12 ರಲ್ಲಿ ನೊಂದಾಯಿಸಿ **ರೂ.100.00 ಲಕ್ಷಗಳಿಗೆ** ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆ.

ಷರತ್ತುಗಳು :-

1. ಪ್ರಸ್ತಾಪಿತ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ವಿಶಿಷ್ಟ ವಿವರಣೆ / ವಿಶಿಷ್ಟತೆ ಸ್ಥಳಕ್ಕೆ ಅನುಗುಣವಾಗಿರುವುದರ ಬಗ್ಗೆ.
2. ಅಂದಾಜು ಪಟ್ಟಿಯಲ್ಲಿ ಪ್ರಸ್ತಾಪಿಸಿರುವ ರಸ್ತೆಗಳನ್ನು ಕಳೆದ ಮೂರು ವರ್ಷಗಳಿಂದ ಯಾವುದೇ ಅನುದಾನದಲ್ಲಿ ಅಭಿವೃದ್ಧಿಗೊಳ್ಳಿಸದೇ ಇರುವುದರ ಬಗ್ಗೆ.
3. ಪ್ರಸುತ್ತ ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಪೂರಕವಾಗಿ ಈ ಹಿಂದೆ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆ ಅಂಶಗಳ ವಿವರಗಳನ್ನು ರಸ್ತೆ ಇತಿಹಾಸ (Road History) ಪ್ರಸ್ತಕದಲ್ಲಿ ಕಾಮಗಾರಿಯ ವಿವರಗಳನ್ನು ನಮೂದಿಸಿ ನಿರ್ವಹಿಸಿರುವುದರ ಬಗ್ಗೆ.
4. ಪ್ರಸ್ತಾಪಿತ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ಅನುಪಯುಕ್ತ (Debris) ವಸ್ತುಗಳ ಸಾಗಾಣಿಗೆ ಪೂರಕವಾಗಿ ವಲಯ ವ್ಯಾಪ್ತಿಯ ಅನುಮೋದಿತ (Notified Dumping Yard)ಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳದಿಂದ Dumping Yardಗೆ ಇರುವ ಅಂತರಕ್ಕೆ ಸಂಬಂಧಿಸಿದಂತೆ Lead Chart ನ್ನು ತಯಾರಿಸಿ ಅನುಮೋದನೆ ಪಡೆದುಕೊಳ್ಳುವ ಬಗ್ಗೆ.
5. Non S.R ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಬಗ್ಗೆ.
6. ಪ್ರಸ್ತಾಪಿತ ಕಾಮಗಾರಿಗೆ ಸಂಬಂಧಿಸಿದಂತೆ Defect Liability Period ಮುಗಿದಿರುವ ಬಗ್ಗೆ.
7. ತಳಪಾಯದ ವಿನ್ಯಾಸವನ್ನು ಸಿದ್ದಗೊಳಿಸಿ ಕೆಲಸ ಆರಂಭಿಸುವ ಮುನ್ನ ಈ ಕಛೇರಿಯ ಒಪ್ಪಿಗೆಯನ್ನು ಪಡೆಯತಕ್ಕದ್ದು.
8. ಸದರಿ ಕಾಮಗಾರಿಗೆ ನೀಡಲಾದ ನಿವೇಶನದ ಲಭ್ಯತೆ ಬಗ್ಗೆ ಟೆಂಡರ್ ಕರಾರು ಮಾಡುವ ಮುನ್ನ ಧೃಡೀಕರಿಸಿ ಕೊಳ್ಳತಕ್ಕದ್ದು.

ಪು.ತಿ.ನೋ

9. ನಿಗದಿಯಾದ ದರಪಟ್ಟಿಯಲ್ಲಿಲ್ಲದ ದರಗಳಿಗೆ (Data Rate) ಮತ್ತು ದರಗಳ ವಿವರಗಳಿಗೆ (Rate Analysis) ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯ ತಕ್ಕದ್ದು.
10. ತೆರವುಗೊಳಿಸಿರುವ ಉಪಯುಕ್ತ ಸಾಮಾಗ್ರಿಗಳ ಬಗ್ಗೆ **MAS** ನ ವಹಿಯಲ್ಲಿ ದಾಖಲಿಸುವುದು ಹಾಗೂ ಈ ತರಹದ ಉಪಯುಕ್ತ ಸಾಮಾಗ್ರಿಗಳನ್ನು ಬೇರೆಡೆ ಉಪಯೋಗಿಸಿರುವ (ಮರು ಬಳಿಕೆ ಮಾಡಿರುವ) ಬಗ್ಗೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ದೃಢೀಕರಿಸಿಕೊಳ್ಳುವುದು.
11. ಪ್ರಸುತ್ತ ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಪೂರಕವಾಗಿ ಈ ಹಿಂದೆ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆ ಅಂಶಗಳ ವಿವರಗಳನ್ನು ರಸ್ತೆ ಇತಿಹಾಸ (Road History) ಪ್ರಸ್ತಕದಲ್ಲಿ ಕಾಮಗಾರಿಯ ವಿವರಗಳನ್ನು ನಮೂದಿಸಿ ನಿರ್ವಹಿಸಿರುವುದರ ಬಗ್ಗೆ.
12. ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಇಡಗಂಟು ರೂಪದಲ್ಲಿ ಒದಗಿಸಲಾಗಿರುವ (LumpSum Provisions) ಮೊತ್ತಗಳಿಗೆ ಉಪಅಂದಾಜನ್ನು ತಯಾರಿಸಿ ಅನುಮೋದನೆ ಪಡೆಯ ತಕ್ಕದ್ದು.
13. ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸುವಾಗ Stander Tender Document KW - 1/2/3/4 ಹಾಗೂ ಆಗಿಂದಾಗ್ಗೆ ಹೊರಡಿಸುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.
14. ಪ್ರಸ್ತಾಪಿತ ಕಾಮಗಾರಿಗೆ ಸಂಬಂಧಿಸಿದ ನಕ್ಷೆಯಂತೆ ವಿನ್ಯಾಸಗಳನ್ನು ಪಡೆದು ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ.
15. ಕಾಮಗಾರಿಯು ಎಲ್ಲಾ ಹಂತದಲ್ಲಿನ ಕಾಮಗಾರಿಯ ಪೂರ್ವ / ಪ್ರಗತಿ / ಪೂರ್ಣಗೊಂಡ ಛಾಯಾ ಚಿತ್ರವನ್ನು ಲಗತ್ತಿಸುವುದು.
16. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಮಾನ್ಯ ಆಯುಕ್ತರವರ ದಿನಾಂಕ:02/11/2017ರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಆ./ಪಿ.ಆರ್/5054/2017-18 ರಂತೆ ಕ್ರಮವಹಿಸುವುದು.
17. ಸದರಿ ಕಾಮಗಾರಿಯ ಬಿಲ್ ಪಾವತಿಸುವ ಸಂದರ್ಭದಲ್ಲಿ ಮಂಜೂರಾದ ತಾಂತ್ರಿಕ ಮಂಜೂರಾತಿಯ ಮೊತ್ತಕ್ಕೆ ಜಿ.ಎಸ್.ಟಿ / ಇತರೆ ತೆರಿಗೆಗಳನ್ನು ಪಾವತಿಸಿರುವ / ಕಟಾಯಿಸಿಕೊಳ್ಳುವ ಬಗ್ಗೆ ಪರಿಶೀಲಿಸಿ, ಧೃಢೀಕರಿಸಿಕೊಳ್ಳತಕ್ಕದ್ದು.

ಮುಖ್ಯ ಅಭಿಯಂತರರು (ದಾಸರಹಳ್ಳಿ)
ಬೃಹತ್ ಬೆಂಗಳೂರು ಮಹಾನಗರಪಾಲಿಕೆ

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಮುಖ್ಯ ಲೆಕ್ಕಾಧಿಕಾರಿಯವರ ಗಮನಕ್ಕೆ ಕಳುಹಿಸಿದೆ.
3. ಕಛೇರಿ ಕಡತಕ್ಕೆ.